ಸಮಾಚಾರ ಸಣ್ಣದಲ್ಲ

ದ್ವಿಪಕ್ಷೀಯ ವ್ಯಾಪಾರ ನೀತಿ ಹೂಡಿಕೆಗೆ ಅನುಕೂಲ

ಬೆಂಗಳೂರು: ಕೆನಡಾ ಹಾಗೂ ಭಾರತದ ನಡುವಿನ ದ್ವಿಪಕ್ಷೀಯ ವ್ಯಾಪಾರ ನೀತಿಯಿಂದ ಹೊಸ ಹೊಸ ಹೂಡಿಕೆಯ ಹಾಗೂ ಉದ್ಯೋಗಾವಕಾಶಗಳ ತೆರೆದುಕೊಳ್ಳಲಿದೆ ಎಂದು ಇಂಡೊ ಕೆನಡಾ ಚೇಂಬರ್ ಆಫ್ ಕಾಮರ್ಸ್ ಅಧ್ಯಕ್ಷ ಅರವಿಂದ ಭಾರದ್ವಾಜ್ ಅಭಿಪ್ರಾಯಪಟ್ಟರು. ಇಂಡೊ ಕೆನಡಾ ಚೇಂಬರ್ಸ್ ಆಫ್ ಕಾಮರ್ಸ್ ಹಾಗೂ ಸನಾತನ ಎಂಟರ್‌ಪ್ರೈನರ್ಸ್ ಅಸೋಸಿಯೇಶನ್ ಸಹಭಾಗಿತ್ವದಲ್ಲಿ ನಡೆದ ಇಂಡಿಯಾ ಮಿಶನ್ ಕಾರ್ಯಕ್ರಮದಲ್ಲಿ ಮಾತನಾಡಿ, ಕೆನಡಾ ದೇಶದಲ್ಲಿ ಅತ್ಯಾಧುನಿಕ ಕೌಶಲ್ಯಗಳು ಹಾಗೂ ತಂತ್ರಜ್ಞಾನ ಅಭಿವೃದ್ಧಿಪಡಿಸಲಾಗಿದೆ. ಆಹಾರ ಸಂಸ್ಕರಣಾ ಉದ್ಯಮದಿಂದ ಹಿಡಿದು, ಐಟಿ, ತ್ಯಾಜ್ಯ ನಿರ್ವಹಣೆ, ನೀರು ಶುದ್ಧೀಕರಣ ಸೇರಿದಂತೆ ಅನೇಕ ಕ್ಷೇತ್ರಗಳಿಗೆ ಅತ್ಯಗತ್ಯವಾದ ತಂತ್ರಜ್ಞಾನ ನಮ್ಮಲ್ಲಿದೆ. ಬೇರೆ ಬೇರೆ ಉದ್ಯಮ ಕ್ಷೇತ್ರದಲ್ಲಿರುವವರು ನಮ್ಮೊಂದಿಗೆ ಕೈಜೋಡಿಸಬಹುದು. ನಮ್ಮ ತಂತ್ರಜ್ಞಾನವನ್ನು ಇಲ್ಲಿಗೆ ಭಾರತಕ್ಕೆ ತಂದು ಇಲ್ಲಿ ಹೂಡಿಕೆ ಮಾಡಿ ಉದ್ಯಮವನ್ನು ಬೆಂಬಲಿಸಲು ನಾವು ಆಸಕ್ತರಾಗಿದ್ದೇವೆ ಎಂದರು. ಸನಾತನ ಎಂಟಪ್ರೈನರ್ಸ್ ಅಸೋಸಿಯೇಶನ್ ರಾಜ್ಯಾಧ್ಯಕ್ಷ ಡಿ.ವಿ.ಪ್ರಭಾಕರ್ ಮಾತನಾಡಿ, ಸಬ್‌ಕಾ ಸಾಥ್ ಸಬ್‌ಕಾ ವಿಕಾಸ್ ಆಶಯದಲ್ಲಿ ಪ್ರತಿನಿಧಿಗಳೊಂದಿಗಿನ ಸಮಾವೇಶ ಆಯೋಜಿಸಲಾಗಿದೆ. ಇಂಡೋ ಕೆನೆಡಿಯನ್ ಚೇಂಬರ್ಸ್ ಆಫ್ ಕಾಮರ್ಸ್‌ನಿಂದ ಪ್ರತಿನಿಧಿಗಳು ಭಾರತ ಪ್ರವಾಸದಲ್ಲಿದ್ದಾರೆ. ಅವರು ಭಾರತದಲ್ಲಿ ಹೂಡಿಕೆ ಮಾಡಲಿದ್ದು, ಹೂಡಿಕೆ ಹಾಗೂ ಹೊಸ ತಂತ್ರಜ್ಞಾನವನ್ನು ಬಳಸಿಕೊಂಡು ಭಾರತದಲ್ಲಿ ಉದ್ಯಮ ಬೆಳೆಯುತ್ತದೆ. ಜತೆಗೆ ಒಂದಷ್ಟು ಹೊಸ ಉದ್ಯೋಗವೂ ಸೃಷ್ಟಿಯಾಗುತ್ತದೆ. ಈ ಮೂಲಕ ಎಲ್ಲರ ವಿಕಾಸವಾಗುತ್ತದೆ ಎಂದು ಹೇಳಿದರು.

ಹಾಕಿ ಪಂದ್ಯಕ್ಕೂ ಮುನ್ನ ಭಾರತಕ್ಕೆ ಹಿನ್ನಡೆ

ಭುವನೇಶ್ವರ: ಹಾಕಿ ವಿಶ್ವಕಪ್‌ನಲ್ಲಿ ಪಾಲ್ಗೊಂಡಿರುವ ಭಾರತ ಹಾಕಿ ತಂಡಕ್ಕೆ ದೊಡ್ಡ ಹಿನ್ನಡೆಯಾಗಿದೆ. ತಂಡದ ಸ್ಟಾರ್ ಮಿಡ್ ಫೀಲ್ಡರ್ ಹಾರ್ದಿಕ್ ಸಿಂಗ್ ಅವರು ಗಾಯಗೊಂಡಿದ್ದು ಅವರು ವೇಲ್ಸ್ ವಿರುದ್ಧದ

ಪಂದ್ಯದಲ್ಲಿ ಪಾಲ್ಗೊಳ್ಳುವುದು ಅನುಮಾನ ಎಂದು ಹೇಳಲಾಗಿದೆ. ಭಾನುವಾರ ನಡೆದ ಡಿ ಗುಂಪಿನ ಇಂಗ್ಲೆಂಡ್ ವಿರುದ್ಧದ ಪಂದ್ಯದ ಕೊನೇ ನಿಮಿಷದ ಆಟದ ವೇಳೆ ಹಾರ್ದಿಕ್ ಸಿಂಗ್ ಸ್ನಾಯು ಸೆಳೆತಕ್ಕೆ ಒಳಗಾಗಿದ್ದರು. ಇಂದು ವೇಲ್ಸ್ ವಿರುದ್ಧ ನಡುವೆ ಪಂದ್ಯ ನಡೆಯಲಿದ್ದು, ಅದಕ್ಕಿಂತ ಮೊದಲು ಹಾರ್ದಿಕ್ ಸಿಂಗ್ ಗುಣಮುಖರಾಗುವುದು ಅನುಮಾನ ಎನಿಸಿದೆ. ರಾಜ್‌ಕುಮಾರ್ ಪಾಲ್ ಭಾರತ ತಂಡದ ಮೀಸಲು ಮಿಡ್‌ಫೀಲ್ಡರ್ ಆಗಿದ್ದು ಅವರು ಹಾರ್ದಿಕ್ ಬದಲಿಗೆ ಆಡಲಿದ್ದಾರೆ ಎಂದು ಹೇಳಲಾಗಿದೆ. ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವಿನ ಪಂದ್ಯ ಡ್ರಾದಲ್ಲಿ ಮುಕ್ತಾಯ ಕಂಡಿತ್ತು. ಆದರೆ, ತಲಾ ಎರಡು ಪಂದ್ಯಗಳನ್ನು ಆಡಿರುವ ಭಾರತ ಹಾಗೂ ಇಂಗ್ಲೆಂಡ್ ತಂಡಗಳ ನಡುವೆ ಆಂಗ್ಲರ ಪಡೆ ಗೋಲ್‌ಗಳ ಅಂತರ ಹೆಚ್ಚು ಪಡೆದಿರುವ ಕಾರಣ ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಪಡೆದುಕೊಂಡಿದೆ. ಗುಂಪು ಹಂತದಲ್ಲಿ ಮೊದಲ ಅಂಕಪಟ್ಟಿಯಲ್ಲಿ ಮೊದಲ ಸ್ಥಾನ ಪಡೆಯುವ ತಂಡ ನೇರವಾಗಿ ಕ್ವಾರ್ಟರ್‌ಫೈನಲ್ಸ್ ಗೇರಲಿದೆ.

ಮಧ್ಯಮ ವರ್ಗದಿಂದಲೇ ಬಂದ ನನಗೆ ಒತ್ತಡದ ಅರಿವಿದೆ

ದೆಹಲಿ: 'ನಾನೂ ಮಧ್ಯಮ ವರ್ಗಕ್ಕೆ ಸೇರಿದವಳು ನನಗೂ ಆ ವರ್ಗದ ಒತ್ತಡದ ಬಗ್ಗೆ ಅರಿವಿದೆ' ಎಂದು ಕೇಂದ್ರ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಹೇಳಿದ್ದಾರೆ. 2023-24ನೇ ಸಾಲಿನ ಕೇಂದ್ರ ಬಜೆಟ್ ಕುರಿತು ಮಾತನಾಡಿ, ಮಧ್ಯಮ ವರ್ಗದ ಮೇಲಿರುವ ಒತ್ತಡದ ಬಗ್ಗೆ ನನಗೆ ಅರಿವಿದೆ. ಈವರೆಗೆ ನಮ್ಮ ಸರಕಾರ ಅವರ ಮೇಲೆ ಯಾವುದೇ ತೆರಿಗೆಯ ಹೊರೆ ಹೊರಿಸಿಲ್ಲ. 5 ಲಕ್ಷದವರೆಗೆ ಆದಾಯ ತೆರಿಗೆ ವಿನಾಯಿತಿ ಇದೆ ಎಂದಿದ್ದಾರೆ. ಅಲ್ಲದೇ ತಮ್ಮ ಸರಕಾರವು ಮಧ್ಯಮ ವರ್ಗದವರಿಗೆ ಇನ್ನಷ್ಟು ಅನುಕೂಲ ಮಾಡಲು ಸಜ್ಜಾಗಿದೆ ಎನ್ನುವ ಭರವಸೆಯನ್ನೂ ನೀಡಿದ್ದಾರೆ. ಮಧ್ಯಮ ವರ್ಗದ ಜನರ ಸಮಸ್ಯೆ ಬಗ್ಗೆ ನನಗೆ ಅರಿವಿದೆ. ಅವರಿಗೆ ಸರಕಾರ ತುಂಬಾ ಅನುಕೂಲಗಳನ್ನು ಮಾಡಿಕೊಟ್ಟಿದೆ. ಅದನ್ನು ಮುಂದುವರಿಸಲಿದೆ ಎಂದು ಹೇಳಿರುವ ಅವರು, ನಮ್ಮ ಸರಕಾರವು 27 ನಗರಗಳಲ್ಲಿ ಮೆಟ್ರೋ ರೈಲು ಯೋಜನೆಯ ಅಭಿವೃದ್ಧಿಗೆ ಹಲವು ಹೆಜ್ಜೆಗಳನ್ನು ತೆಗೆದುಕೊಂಡಿದೆ. ಜನ ಜೀವನ ಸುಲಭವಾಗಿಸಲು 100 ಸ್ಮಾರ್ಟ್ ಸಿಟಿಯನ್ನು ನಿರ್ಮಾಣ ಮಾಡಲಾಗುತ್ತಿದೆ ಎಂದರು.

ಮಹಿಳಾ ಕ್ರಿಕೆಟ್‌ನಲ್ಲಿ ಬಹುದೊಡ್ಡ ಬದಲಾವಣೆ

ದೆಹಲಿ: ಭಾರತ ಮಹಿಳಾ ಕ್ರಿಕೆಟ್ ತಂಡದ ಮಾಜಿ ನಾಯಕಿ ಮಿಥಾಲಿ ರಾಜ್ ಮಹಿಳಾ ಐಪಿಎಲ್ ಟೂರ್ನಿಯ ಹಿನ್ನೆಲೆಯಲ್ಲಿ ಪ್ರತಿಕ್ರಿಯೆ ನೀಡಿದ್ದು ಇದು ಮಹಿಳಾ ಕ್ರಿಕೆಟ್‌ನಲ್ಲಿ ಬಹುದೊಡ್ಡ ಬದಲಾವಣೆಗೆ ಕಾರಣವಾಗಲಿದೆ ಎಂದಿದ್ದಾರೆ. ಐಪಿಎಲ್ ಪ್ರಸಾರದ ಹಕ್ಕನ್ನು ರಿಲಾಯನ್ಸ್ ಒಡೆತನದ ವಯಕಾಮ್ 18 ಗೆದ್ದುಕೊಂಡಿರುವುದನ್ನು ಬಿಸಿಸಿಐ ಕಾರ್ಯದರ್ಶಿ ಜಯ್ ಶಾ ಟ್ವಿಟ್ಟರ್‌ನಲ್ಲಿ ಘೋಷಣೆ ಮಾಡಿದರು. ಮಹಿಳಾ ಐಪಿಎಲ್ ಟೂರ್ನಿಯ ಮುಂದಿನ ಐದು ಆವೃತ್ತಿಗಳ ಪ್ರಸಾರದ ಹಕ್ಕು 951 ಕೋಟಿ ಮೊತ್ತಕ್ಕೆ ವಯಕಾಮ್ 18 ಖರೀದಿಸಿದೆ. ಇದರರ್ಥ ಮುಂದಿನ ಐದು ವರ್ಷಗಳ ಕಾಲ ಮಹಿಳಾ ಐಪಿಎಲ್ ಟೂರ್ನಿಯ ಪ್ರತಿ ಪಂದ್ಯಕ್ಕೆ 7.09 ಕೋಟಿ ಮೊತ್ತವನ್ನು ವಯಕಾಮ್ 18 ಬಿಸಿಸಿಐಗೆ ನೀಡಬೇಕಾಗುತ್ತದೆ.

ಮಹಿಳಾ ಐಪಿಎಲ್ ಪ್ರಸಾರದ ಹಕ್ಕು ಮಾರಾಟದ ಬಳಿಕ ಟ್ವೀಟ್‌ನಲ್ಲಿ ಜಯ್ ಶಾ ಇದು ಐತಿಹಾಸಿಕ ಸಂಗತಿ ಎಂದು ಬಣ್ಣಿಸಿದ್ದಾರೆ. ಹೊಸ ಯುಗದ ಆರಂಭ ಎಂದು ಕರೆದಿರುವ ಜಯ್ ಶಾ ಭಾರತದಲ್ಲಿ ಮಹಿಳಾ ಕ್ರಿಕೆಟ್‌ನ ಸಬಲೀಕರಣಕ್ಕೆ ದೊಡ್ಡ ಮತ್ತು ಅತ್ಯಂತ ಮಹತ್ವದ ಹೆಜ್ಜೆ ಎಂದಿದ್ದಾರೆ. ಈ ಸಂದರ್ಭದಲ್ಲಿ ಎಲ್ಲಾ ವಯಸ್ಸಿನ ಮಹಿಳಾ ಕ್ರಿಕೆಟ್ ಆಟಗಾರ್ತಿಯರಿಗೆ ಮಹಿಳಾ ಐಪಿಎಲ್ ವೇದಿಕೆ ನೀಡಲಿದೆ ಎಂಬ ಭರವಸೆ ನೀಡಿದ್ದಾರೆ.

ವಿಶ್ವವಾಣಿ ಕ್ಲಬ್‌ಹೌಸ್ ಏರ್ಪಡಿಸಿದ್ದ 'ಯಶಸ್ಸಿನ ಸಮ್ಮೇಳನ' ಕಾರ್ಯಕ್ರಮದಲ್ಲಿ ಡಾ. ಮಹೇಶ್ ಜೋಶಿ

ಮೊಸರಲ್ಲಿ ಕಲ್ಲು ಹುಡುಕುವವರ ಮಧ್ಯೆಯೂ ಸಮ್ಮೇಳನ ಯಶಸ್ವಿ

ವಿಶ್ವವಾಣಿ ಸುದ್ದಿಮನೆ ಬೆಂಗಳೂರು

ಹಾವೇರಿ ಸಮ್ಮೇಳನ ಕೆಡಿಸಬೇಕು, ಮುಖ್ಯಮಂತ್ರಿ ಹಾಗೂ ಅಧ್ಯಕ್ಷರಿಗೆ ಕೆಟ್ಟ ಹೆಸರು ತರಬೇಕು ಎಂಬ ಷಡ್ಯಂತ್ರ ನಾನು ಚುನಾವಣೆಗೆ ನಿಂತಾಗಿನಿಂದ ಪ್ರಾರಂಭವಾಗಿತ್ತು. ಆದರೂ ಸಾಹಿತ್ಯ ಸಮ್ಮೇಳನ ಯಶಸ್ವಿಯಾಗುವ ಲಕ್ಷಣ ಕಾಣಿಸುತ್ತಿದ್ದಂತೆ ಮೊಸರಲ್ಲಿ ಕಲ್ಲು ಹುಡುಕುವ ಕೆಲಸ ಮಾಡಿದರು. ಇದರ ಮಧ್ಯೆಯೂ ಸಾಹಿತ್ಯಾಸಕ್ತರ ಸಹಕಾರ ಮತ್ತು ಜನರ ಬೆಂಬಲದಿಂದಾಗಿ ಹಾವೇರಿ ಯಲ್ಲಿ ನಡೆದ 86ನೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನವನ್ನು ಅತ್ಯಂತ ಯಶಸ್ವಿಯಾಗಿ ಪೂರ್ಣಗೊಳಿಸಿದ ಸಮಾಧಾನ, ನೆಮ್ಮದಿ ಇದೆ ಎಂದು ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ನಾಡೋಜ ಡಾ.ಮಹೇಶ್ ಜೋಶಿ ಹೇಳಿದ್ದಾರೆ.

ವಿಶ್ವವಾಣಿ ಕ್ಲಬ್‌ಹೌಸ್ ಏರ್ಪಡಿಸಿದ್ದ 'ಯಶಸ್ಸಿನ ಸಮ್ಮೇಳನ' ಕಾರ್ಯಕ್ರಮದಲ್ಲಿ ಮಾತನಾಡಿ 27 ವರ್ಷ ನಾನು ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಭಾಗವಹಿಸಿದ್ದೇನೆ. ವಿಕ್ಷಕನಾಗಿ ಹಾಗೂ ದೂರದರ್ಶನ ಮುಖ್ಯಸ್ಥನಾಗಿ ಪಾಲ್ಗೊಂಡಿದ್ದೇನೆ. ಎಲ್ಲಾ ಸಮ್ಮೇಳನಗಳ ಪೈಕಿ ಅತಿ ಹೆಚ್ಚು ಜನರನ್ನು ಆಕರ್ಷಣೆ ಮಾಡಿದ್ದು ಹಾವೇರಿ ಸಮ್ಮೇಳನ. ಬಹಳ ವ್ಯವಸ್ಥಿತವಾಗಿ, ಮಾರ್ಗದರ್ಶನ ಹಾಗೂ ಮಾನದಂಡ ಹಾಕಿದ ಸಮ್ಮೇಳನ ಇದಾಗಿತ್ತು. ಸಮ ಯಕ್ಕೆ ಪ್ರಾಶಸ್ತ್ಯ ನೀಡಿದ ಮೊದಲನೇ ಸಮ್ಮೇಳನ. ವಿಶಿಷ್ಟವಾಗಿ ಹಾಗೂ ವಿವಿಧ ದಾಖಲೆಗಳನ್ನು ನಿರ್ಮಿಸಿತು ಎಂದರು. 86ನೇ ಸಾಹಿತ್ಯ ಸಮ್ಮೇಳನದ ಯಶಸ್ಸನ್ನು ತಾಳಲಾರದೆ ಮೊಸರಿನಲ್ಲಿ ಕೆಸರು ಹುಡುಕುವ ಕೆಲಸ ಮಾಡಿದ್ದರು. ಇದರ ಹಿನ್ನಲೆಯಲ್ಲಿ ಬೆಂಗಳೂರಿನಲ್ಲಿ ಜನ ಸಾಹಿತ್ಯ ಸಮ್ಮೇಳನ ಏರ್ಪಡಿಸಿದ್ದರು. ಆದರೆ ನಮ್ಮ ಸಾಹಿತ್ಯ ಸಮ್ಮೇಳನದಲ್ಲಿ ಎಷ್ಟು ಜನರು ಭಾಗಿಯಾಗಿದ್ದರು ಅವರ ಸಮ್ಮೇಳನದಲ್ಲಿ ಎಷ್ಟು ಮಂದಿ ಇದ್ದರು ಎಂಬುದನ್ನು ನೋಡಿದರೆ ಯಶಸ್ಸು ಪಡೆದವರು ಯಾರು ಎಂಬುದಕ್ಕೆ ಉತ್ತರ ಸಿಗುತ್ತದೆ. ಹಾವೇರಿ ಸಮ್ಮೇಳನ ಯಶಸ್ವಿಯಾಗಿರುವುದಕ್ಕೆ ಜನರ ಸ್ಪಂದನೆ, ಬಾಗಿಯೇ ಸಾಕ್ಷಿ. ಆದರೆ, ಜನ ಸಾಹಿತ್ಯ ಸಮ್ಮೇಳನದಲ್ಲಿ ಜನವೂ ಇಲ್ಲ ಸಾಹಿತ್ಯವೂ ಇರಲಿಲ್ಲ. ಕೇವಲ ಬೈಗುಳವಿತ್ತು ಎಂದು ಹೇಳಿದರು.

ಅಧ್ಯಕ್ಷ ಚುನಾವಣೆಯಿಂದ ನನ್ನ ವಿರುದ್ಧ ಷಡ್ಯಂತ್ರ: ನಾನು ಕಸಾಪ ಅಧ್ಯಕ್ಷ ಸ್ಥಾನದ ಚುನಾವಣೆಗೆ ನಿಂತಾಗಲೇ ಹಾವೇರಿ ಸಮ್ಮೇಳನ ಕೆಡಿಸಬೇಕು, ಮುಖ್ಯಮಂತ್ರಿ ಹಾಗೂ ಅಧ್ಯಕ್ಷರಿಗೆ ಕೆಟ್ಟ ಹೆಸರು ತರಬೇಕು ಎಂಬ ಷಡ್ಯಂತ್ರ ಆರಂಭವಾಗಿತ್ತು. ಪತ್ರಿಕೆಯೊಂದು 'ನಾವು ಚುನಾವಣೆಯಲ್ಲಿ ಭಾಗವಹಿಸುವುದನ್ನು ವಿರೋಧಿಸೋಣ', 'ಮಹೇಶ್ ಜೋಶಿ ಅವರಿಗೆ ಮತಹಕಬೇಡಿ' ಎಂದು ವರದಿ ಮಾಡಿತ್ತು. ಆದರೆ, ನಾನು ಏನೂ ಮಾತನಾಡಲಿಲ್ಲ. ಚುನಾವಣೆ ಫಲಿತಾಂಶದಲ್ಲಿ ಮತದಾರರು ತಕ್ಕ ಉತ್ತರ ನೀಡಿದರು. ಷಡ್ಯಂತ್ರ ರೂಪಿಸಿದ ಬೆಂಬಲಿತ ವ್ಯಕ್ತಿಗಳು ಠೇವಣಿ ಕಳೆದುಕೊಂಡರು ಎಂದರು.

ಅಚ್ಚುಕಟ್ಟಾಗಿ, ಬದ್ಧತೆಯಿಂದ ಹಾವೇರಿಯ 86ನೇ ಕನ್ನಡ ಸಾಹಿತ್ಯ ಸಮ್ಮೇಳನ ನಡೆದಿದೆ. ಸಮ್ಮೇಳನಕ್ಕೆ ಆಗಮಿಸಿದ ಲಕ್ಷಾಂತರ ಗ್ರಾಮೀಣ ಜನರಿಗೆ ಅಚ್ಚುಕಟ್ಟಾದ ವ್ಯವಸ್ಥೆ ಮಹೇಶ್ ಜೋಶಿ ನೇತೃತ್ವದಲ್ಲಿ ಏರ್ಪಡಿಸಲಾಗಿತ್ತು. ವಿರೋಧಿಸುವ ಗುಂಪು ಮಹೇಶ್ ಜೋಶಿ ಯಶಸ್ವಿಯಾಗಬಾರದು ಎಂಬ ಉದ್ದೇಶವನ್ನು ಹೊಂದಿದ್ದರೂ ಜನರು ಜೋಶಿ ಅವರನ್ನು ಯಶಸ್ವಿಯನ್ನಾಗಿ ಮಾಡಿದರು. ಜೋಶಿ ಅವರ ನೇತೃತ್ವದ ಸಮ್ಮೇಳನವನ್ನು ಮುಖ್ಯಮಂತ್ರಿಯವರೇ ಪ್ರಶಂಸಿಸಿದ್ದಾರೆ.

- ನಂಜನಗೂಡು ಮೋಹನ್,
ಸಂಪಾದಕೀಯ ಸಲಹೆಗಾರರು,
ವಿಶ್ವವಾಣಿ

ವಿಶಾಲ ಮನಸ್ಸಿನಿಂದ ನೋಡಿ

ಮೊದಲ ಬಾರಿಗೆ ಕನ್ನಡದ ರಥ ವಿನ್ಯಾಸ ಮಾಡಿ ಭುವನೇಶ್ವರಿ ದೇವಾಲಯದಲ್ಲಿ ಪೂಜೆ ಮಾಡಿ ರಾಜ್ಯಾದ್ಯಂತ ಜ್ಯೋತಿ ತೆಗೆದುಕೊಂಡು ಹೋಗಿದ್ದ ವಾಹನ ವಿನ್ಯಾಸ ಮಾಡಿದವರು ಮುಸಲ್ಮಾನರು. ರಥದ ಸಾರಥಿಯಾಗಿದ್ದ ವರೂ ಒಬ್ಬ ಮುಸಲ್ಮಾನ. ನಾನು ಯಾರನ್ನೂ ಜಾತಿಯಿಂದ ನೋಡಲಿಲ್ಲ. ಸಾಮಾರಸ್ಯ ಸಾರುವ ಉದ್ದೇಶದಿಂದ ವೇದಿಕೆಗಳಿಗೂ ಸಾದು-ಸಂತ ಮತ್ತು ಕ್ರಾಂತಿಕಾರಿಗಳ ಹೆಸರನ್ನು ಇಡಲಾಯಿತು. ಹೀಗಾಗಿ ಯಾರನ್ನೇ ಆಗಲಿ, ಕಾಮಾಲೆ ಕಣ್ಣಿನಿಂದ ನೋಡಿ ಮಾತನಾಡುವ ಬದಲು ವಿಶಾಲ ಮನಸ್ಸಿನಿಂದ ನೋಡಿ ಮಾತನಾಡಬೇಕು ಎಂದು ಡಾ.ಮಹೇಶ್ ಜೋಶಿ ಹೇಳಿದರು.

ಮಾನವೀಯತೆ ಸಾರಿದ ಮಹನೀಯರ ಮರಿಮೊಮ್ಮಗ ನಾನು

ಅಖಿಲ ಕನ್ನಡ ಸಾಹಿತ್ಯ ಸಮ್ಮೇಳನವನ್ನು ವಿರೋಧಿಸಿ ಪೆಂಡಾಲ್ ಪುರುಷೋತ್ತಮ ಬಿಳಿಮಲೆ ಮತ್ತು ಪತ್ರಕರ್ತ ಹನೀಫ್ ಅವರು ಬೆಂಗಳೂರಿನಲ್ಲಿ ಏರ್ಪಡಿಸಿದ್ದ ಜನ ಸಾಹಿತ್ಯ ಸಮ್ಮೇಳನದಲ್ಲಿ ಶಿಶುನಾಳ ಶರೀಫ ಮತ್ತು ಅವರ ಗುರುಗಳಾದ ಗುರು ಗೋವಿಂದ ಭಟ್ಟರ ಚಿತ್ರವನ್ನು ಬಳಸಿದ್ದರು. ಗೋವಿಂದ ಭಟ್ಟರ ಚಿತ್ರವನ್ನು ಹಾಕಿ ಅವರ ಮರಿಮೊಮ್ಮಗನ ಮೇಲೆಯೇ ಷಡ್ಯಂತ್ರ ಮಾಡುತ್ತಾರೆ. ಕಳಸದ ಗುರು ಗೋವಿಂದ ಭಟ್ಟರು ನನ್ನ ಮುತ್ತಾತ. ಈ ವಿಚಾರವನ್ನು ನಾನು ಮೊದಲಿನಿಂದಲೂ ಹೇಳಿಕೊಂಡು ಬಂದಿದ್ದೇನೆ. ಆದರೂ ಈ ಬಗ್ಗೆ ಅನುಮಾನ ಮಾಡುವಂತೆ ಮಾಡಿದರು. ಇದೇ ರೀತಿ ಮುಂದುವರಿದು ನನ್ನ ವೈಯಕ್ತಿಕ ವಿಚಾರಕ್ಕೆ ತಲೆ ಹಾಕಿದರೆ ನ್ಯಾಯಾಲಯದ ಮೊರೆ ಹೋಗುವುದಾಗಿ ಡಾ. ಮಹೇಶ್ ಜೋಶಿ ಎಚ್ಚರಿಕೆ ನೀಡಿದರು.

ಜನರ ಭಾಗಿತ್ವವೇ ಈ ಬಾರಿ ಸಮಾವೇಶದ ಯಶಸ್ಸು;

ಇಷ್ಟು ದೊಟ್ಟ ಪ್ರಮಾಣದಲ್ಲಿ ಸಮ್ಮೇಳವನ್ನು ಹಮ್ಮಿಕೊಂಡಾಗ ಸಣ್ಣಪುಟ್ಟ ಲೋಪಗಳಾಗುವುದು ಸಹಜ. ಆದರೆ, ಈ ಬಾರಿಯ ಸಮ್ಮೇಳನದಲ್ಲಿ ಅಂತಹದ್ದಕ್ಕೂ ಅವಕಾಶವಿರಲಿಲ್ಲ. ಶಿಸ್ತುಬದ್ಧವಾದ ಸಮ್ಮೇಳನ. ಅದು ಯಾರೋ ಮಾಡುವ ಹಬ್ಬವಲ್ಲ, ರಾಜಕೀಯ ಸಮಾವೇಶವಲ್ಲ, ಕನ್ನಡಿಗರ ಹಬ್ಬ, ಕನ್ನಡಿಗರ ಸಮ್ಮೇಳನ. ಸಾಮಾನ್ಯ ವ್ಯಕ್ತಿಯೂ ಅತ್ಯಂತ ಕ್ರಿಯಾಶೀಲನಾಗಿ ಮೂರು ದಿನವೂ ಬಾಗಿಯಾಗಿರುವುದೇ ಈ ಸಮ್ಮೇಳನದ ಯಶ್ಸಿನ ಗುಟ್ಟು. ಕನ್ನಡ ಅಕ್ಷರ, ಕನ್ನಡ ಭಾಷೆಯ ನೆಪದಲ್ಲಿ ಒಂದು ತಾಣದಲ್ಲಿ 7-8ಲಕ್ಷ ಜನರು ಸೇರುವುದು ತುಂಬಾ ದೊಡ್ಡದು. ಇಂದಿನ ದಿನಮಾನದಲ್ಲಿ ಜನರನ್ನು ಸೇರಿಸುವುದು ಕಷ್ಟ. ಆದರೆ ಹಾವೇರಿ ಸಮ್ಮೇಲನದಲ್ಲಿ ಸ್ವಯಂ ಸ್ಫೂರ್ತಿ , ಸ್ವಯಂ ಪ್ರೇರಣೆಯಿಂದ ಜನ ಬಂದಿರುವುದನ್ನು ಪ್ರತ್ಯಕ್ಷದರ್ಶಿಯಾಗಿ ಕಂಡಿದ್ದೇನೆ. ಕೆಲವರು ತಮ್ಮ ಮನಸ್ಸಿನಲ್ಲಿರುವ ಹತಾಶೆ, ಅಸೂಯೆ ಮತ್ತು ದ್ವೇಷವನ್ನು ಹೊರಹಾಕಲಿಕ್ಕೆಂದೇ ಇರುತ್ತಾರೆ. ಅವರ ಬಗ್ಗೆ ಬಹಳ ತಲೆಕೆಡಿಸಿಕೊಳ್ಳಬೇಕಾದ ಅವಶ್ಯಕತೆ ಇಲ್ಲ. ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ಇದೆಲ್ಲದಕ್ಕಿಂತ ಮಿಗಿಲಾದ ಜವಾಬ್ದಾರಿ, ಹೊಣೆಗಾರಿಕೆ ಇರುತ್ತದೆ ಎಂದು ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್ ಹೇಳಿದರು.

ದಾಖಲೆ-ಅನೇಕ ಪ್ರಥಮಗಳಿಗೆ ನಾಂದಿ

- **ಹಾವೇರಿಯಲ್ಲಿ ನಡೆದ 86ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನ ಅತೀ ಹೆಚ್ಚು ಪುಸ್ತಕ ಮಾರಾಟ ವಾಗಿರುವ, ದೂಳು ರಹಿತವಾದ, ಜರ್ಮನ್ ಟೆಂಟ್ ಉಪಯೋಗಿಸಿದ, ಶಿಸ್ತಿ ಸಮ್ಮೇಳವಾ ಗಿತ್ತು. 300 ಪುಸ್ತಕ ಮಳಿಗೆ, 200ವಾಣಿಜ್ಯ ಮಳಿಗೆಗೆ ಅವಕಾಶ ಮಾಡಿದರೂ ಅನೇಕ ಮನವಿ ಬಂದ ಕಾರಣ 100 ಪುಸ್ತಕ ಮಳಿಗೆ ಹೆಚ್ಚು ಮಾಡಲಾಯಿತು. 7ರಿಂದ ಏಳೂವರೆ ಕೋಟಿ ಪುಸ್ತಕ ಮಾರಾಟವಾಗಿದ್ದು, 4ರಿಂದ 5 ಕೋಟಿ ವಾಣಿಜ್ಯ ಮಳಿಗೆಯಲ್ಲಿ ವ್ಯಾಪಾರವಾಗಿದೆ ಎಂದು ಡಾ.ಮಹೇಶ್ ಜೋಶಿ ತಿಳಿಸಿದರು.**

ಆಸ್ಟ್ರೇಲಿಯಾ ಓಪನ್ ಬ್ಯಾಡ್ಮಿಂಟನ್

ನಡಾಲ್- ಶ್ವಾಂಟೆಕ್ ಶುಭಾರಂಭ

ಮೆಲ್ಬರ್ನ್: ಪುರುಷರ ಮತ್ತು ಮಹಿಳೆಯರ ವಿಭಾಗದಲ್ಲಿ ಅಗ್ರಶ್ರೇಯಾಂಕ ಪಡೆದಿರುವ ರಫೆಲ್ ನಡಾಲ್ ಹಾಗೂ ಇಗಾ ಶ್ವಾಂಟೆಕ್ ಅವರು ಆಸ್ಟ್ರೇಲಿಯಾ ಓಪನ್ ಗ್ರ್ಯಾನ್ ಸ್ಲಾಮ್ ಟೆನಿಸ್ ಟೂರ್ನಿಯಲ್ಲಿ ಶುಭಾರಂಭ ಮಾಡಿದರು. ಸತತ ಎರಡನೇ ಪ್ರಶಸ್ತಿಯ ನಿರೀಕ್ಷೆಯಲ್ಲಿರುವ 36 ವರ್ಷದ ನಡಾಲ್ ಸೋಮವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 7-5, 2-6, 6-4, 6-1 ರಲ್ಲಿ ಬ್ರಿಟನ್‌ನ ಜಾಕ್ ಡ್ರೇಪರ್ ಅವರನ್ನು ಮಣಿಸಿದರು.

ಮೊದಲ ಸೆಟ್ ಪ್ರಯಾಸದಿಂದ ಗೆದ್ದ ಸ್ಪೇನ್‌ನ ಆಟಗಾರ, ಎರಡನೇ ಸೆಟ್‌ನಲ್ಲಿ ಸೋತರು. ಆ ಬಳಿಕ ಲಯ ಕಂಡುಕೊಂಡರಲ್ಲದೆ ಐದು ಗೇಮ್‌ಗಳನ್ನು ಮಾತ್ರ ಎದುರಾಳಿಗೆ